**ಪ್ರಧಾನ ಜಿಲ್ಲಾ ಮತ್ತು ಸತ್ರ/ವಿಶೇಷ ನ್ಯಾಯಾಧೀಶರ ನ್ಯಾಯಾಲಯ, ಉಡುಪಿ ಜಿಲ್ಲೆ , ಉಡುಪಿ**

ಸ್ಪೆಷಲ್ ಕೇಸ್ ನಂಃ 56/2016 ಪಿ.ಡಬ್ಲ್ಯೂಃ 8

ಸಿ.ಡಬ್ಲ್ಯೂಃ 18

| | |
|---|---|
| ಸಾಕ್ಷಿದಾರರ ಹೆಸರು | ವಿಧಿ ಸಿನ್ಹಾ |
| ತಂದೆಯ ಹೆಸರು | ಪ್ರಣಯ್ |
| ವಯಸ್ಸು | 30 ವರ್ಷ |
| ಉದ್ಯೋಗ | ಸಾಪ್ಟ್‌ವೇರ್ ಇಂಜಿನಿಯರ್ |
| ವಿಳಾಸ | ಬೆಂಗಳೂರು |

ದಿನಾಂಕಃ 04-11-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ:**

1) ನನಗೆ ಆರೋಪಿ ಗೊತ್ತು, ಆತ ನನ್ನ ಗೆಳೆಯ. ಆರೋಪಿ 2015 ನೇ ಸಾಲಿನಲ್ಲಿ ಮಣಿಪಾಲದ ಅಪಾರ್ಟಮೆಂಟ್‌ನಲ್ಲಿ ವಾಸವಾಗಿದ್ದ. ಆತ ಮೂಲತಃ ಜಾರ್ಖಂಡ್ ರಾಜ್ಯದ ವಾಸಿ. ಆತ ಮಣಿಪಾಲದಲ್ಲಿ ಇಂಜಿನಿಯರಿಂಗ್ ಓದುತ್ತಿದ್ದ ಎಂದು ಗೊತ್ತು. ನನಗೆ ಈಗ ತೋರಿಸಿದ ನಿಪಿ-12 ರ ಪೋಟೊದಲ್ಲಿ ನಾನು ಇದ್ದೇನೆ. ಅದರಲ್ಲಿ ಆರೋಪಿಯೂ ಸಹ ಇದ್ದಾನೆ. ಅಲ್ಲಿ ಪೊಲೀಸರು ಸಹ ಇದ್ದಾರೆ. ಸದರಿ ಪೋಟೋವನ್ನು ಆರೋಪಿಯ ಅಪಾರ್ಟಮೆಂಟ್ ನಲ್ಲಿ ತೆಗೆಯಲಾಗಿತ್ತು. ಸದರಿ ಪೋಟೋವನ್ನು ಪೊಲೀಸರಲ್ಲಿ ಒಬ್ಬರು ತೆಗೆದಿದ್ದರು. ನನಗೆ ಪೋಟೋವನ್ನು ತೆಗೆದುಕೊಂಡಿದ್ದ ದಿನಾಂಕ ಈಗ ನೆನಪಿಲ್ಲ, ಅದು ಸುಮಾರು 9 – 10 ವರ್ಷಗಳ ಹಿಂದೆ. ಆಗ ಬಂದಿದ್ದ ಪೊಲೀಸರು ಸಹ ಯಾವ ಠಾಣೆಯವರು ಎಂದು ಗೊತ್ತಿಲ್ಲ. ಯಾವ ಕಾರಣಕ್ಕಾಗಿ ಪೋಟೋ ತೆಗೆದಿದ್ದರು ಎಂದು ಗೊತ್ತಿಲ್ಲ.

2) ನಾನು, ಪೊಲೀಸರು ಬರುವ 2-3 ದಿನಗಳಿಂದ ಆರೋಪಿತನ ಪ್ಲಾಟ್ ನಲ್ಲಿ ಇದ್ದೆ. ನಾನು ಆರೋಪಿಯ ಪ್ಲಾಟ್ ಗೆ ಬರುವ ಸುಮಾರು 2-3 ವರ್ಷಗಳ ಮೊದಲಿನಿಂದಲೂ ಆತ ನನಗೆ ಗೊತ್ತು. ಆರೋಪಿತನ ಆ ಮನೆಯಲ್ಲಿ 2 ಅಥವಾ 3

ಬೆಡ್ ರೂಮ್ ಗಳು ಇದ್ದವು. ಆ ಬೆಡ್ ರೂಮ್ ಗಳಲ್ಲಿ ಬೇರೆ ಪ್ಲ್ಯಾಟ್‌ಮೇಟ್ ಗಳು ಸಹ ಇದ್ದರು. ಚಾಸಾ -20 ಆಗ ಆರೋಪಿತನೊಂದಿಗೆ ಪ್ಲ್ಯಾಟ್ ಮೇಟ್ ಆಗಿದ್ದ, ಆತ ಬೇರೆ ಬೆಡ್ ರೂಮ್ ನಲ್ಲಿ ಇರುತ್ತಿದ್ದ. ನಿಶಾಲ್ ಎನ್ನುವವರು ನನಗೆ ಗೊತ್ತಿಲ್ಲ. ನನಗೆ ಚಾಸಾ -9 ರಿಂದ 16 ರವರ ಪರಿಚಯ ಇಲ್ಲ.

3) ನಿಶಾನೆ ಪಿ-1 ರಲ್ಲಿರುವ ನನ್ನ ಸಹಿಯನ್ನು ಈಗ ನೋಡಿ ಗುರುತಿಸಿದ್ದೇನೆ. ಅದನ್ನು ನಿಶಾನೆ ಪಿ-1(ಡಿ) ಎಂದು ಗುರುತಿಸಿದೆ. ಸದರಿ ಸಹಿಯನ್ನು ನಾನು ಠಾಣೆಯಲ್ಲಿ ಪೊಲೀಸರು ಬಂದ ಮಾರನೇ ದಿನ ಮಾಡಿದ್ದೆ. ನಿಪಿ-1 ರಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ. ಪೊಲೀಸರು ಯಾವ ಕಾರಣಕ್ಕೆ ಬಂದಿದ್ದರು, ಏನು ಮಾಡಿದ್ದರು ಎಂದು ಗೊತ್ತಿಲ್ಲ. ಪೊಲೀಸರು ನನ್ನ ಸಮಕ್ಷಮ ಏನನ್ನು ಜಪ್ತು ಮಾಡಿಲ್ಲ.

**( ಈ ಹಂತದಲ್ಲಿ ಸರಕಾರಿ ಅಭಿಯೋಜಕರ ವಿನಂತಿಯ ಮೇರೆಗೆ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿಸವಾಲು ಮಾಡಲು ಸರಕಾರಿ ಅಭಿಯೋಜಕರಿಗೆ ಅನುಮತಿ ಕೊಡಲಾಯಿತು)**

**ಪಾಟೀಸವಾಲುಃ ಸರಕಾರಿ ಅಭಿಯೋಜಕರಿಂದ**

1) ಪೊಲೀಸರು ದಿನಾಂಕ 18-03-2015 ರಂದು ಆರೋಪಿಯ ಅಧಿತಿ ಅಪಾರ್ಟಮೆಂಟ್ ನ 002 ರ ರೂಮ್ ಗೆ ಬಂದಿದ್ದರು ಎಂದರೆ,ನಿಜ. ಆದಿನ ಆ ರೂಮ್ ನ್ನು ತಪಾಸಣೆ ಮಾಡಿದಾಗ, ರೂಮ್ ನ ಬೀರುವಿನಲ್ಲಿ 50 ಕಾಗದದ ತೊಟ್ಟೆಗಳಲ್ಲಿದ್ದವು ಎಂದರೆ ನಿಜ. ಆ ತೊಟ್ಟೆಗಳಲ್ಲಿ ಗಾಂಜಾ ಇತ್ತು ಎಂದರೆ, ಆ ತೊಟ್ಟೆಗಳಲ್ಲಿ ಏನು ಇತ್ತು ಎಂದು ನನಗೆ ಗೊತ್ತಿಲ್ಲ. ಆ ಬೀರುವಿನಲ್ಲಿ ಪೇಪರ್ ತೊಟ್ಟೆ ಗಳೊಂದಿಗೆ ರೂಾ 5 ಸಾವಿರ ಹಣ ಮತ್ತು ಒಂದು ತೂಕದ ಸಾಧನ ಇತ್ತು ಎಂದರೆ ಸರಿಯಲ್ಲ. ಆದಿನ ಆರೋಪಿತನ ಅಂಗ ತಪಾಸಣೆ ಮಾಡಿದಾಗ ಆತನ ಬಳಿ ಒಂದು ಎಸಸ್ ಮೊಬೈಲ್ ಇತ್ತು ಎಂದರೆ ಸರಿಯಲ್ಲ. ಆರೋಪಿಯ ಪ್ಲ್ಯಾಟ್ ನ ವರಾಂಡದಲ್ಲಿ ಎರಡು ಗಾಂಜಾಗಳನ್ನು ಬೆಳೆಸಿದ್ದರು ಎಂದರೆ ಗೊತ್ತಿಲ್ಲ. ನನ್ನ ಸಮಕ್ಷಮ ಪೊಲೀಸರು ಆರೋಪಿತನ ರೂಮ್ ನಿಂದ ಪೇಪರ್ ತೊಟ್ಟೆಗಳಲ್ಲಿ ಇದ್ದ ಗಾಂಜಾ, ಹಣ, ಮೊಬೈಲ್ ಮತ್ತು ಗಾಂಜಾ ಸಸಿಗಳನ್ನು ಜಪ್ತು ಮಾಡಿದ್ದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ಬರೆದಿದ್ದ ನಿಪಿ-1 ನ್ನು ಓದಿ ಹೇಳಿ, ನನ್ನ ಸಹಿ ಪಡೆದಿದ್ದರು ಎಂದರೆ ಸರಿಯಲ್ಲ.

2) ನನಗೆ ನಿಪಿ-1 ರಡಿಯಲ್ಲಿ ಜಪ್ತಾದ ವಸ್ತುಗಳ ಬಗ್ಗೆ ಮಾಹಿತಿ ಇದ್ದರೂ ಸಹ, ಆರೋಪಿ ನನ್ನ ಸ್ನೇಹಿತನಾಗಿದ್ದರಿಂದ ಆತನಿಗೆ ಸಹಾಯ ಮಾಡಲು ಈ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ ಆರೋಪಿ ಪರವಾಗಿ ಶ್ರೀ ಎಸ್.ಎ. ವಕೀಲರಿಂದ**

1) ನನಗೆ ಕನ್ನಡ ಬರುವುದಿಲ್ಲ. ನಿಪಿ-1 ಕ್ಕೆ ನಾನು ಸಹಿ ಮಾಡಿದಾಗ ಬೇರೆ ಯಾರು ಸಹಿ ಮಾಡಿದ್ದರು ಎಂದು ಗೊತ್ತಿಲ್ಲ. ಪೊಲೀಸರು ಆರೋಪಿತನ ಫ್ಲ್ಯಾಟ್ ಗೆ ಭೇಟಿ ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿತನ ರೂಮ್ ನಿಂದ ನಿಪಿ-1 ರಲ್ಲಿ ಹೇಳಿದ ವಸ್ತುಗಳನ್ನು ಜಪ್ತು ಮಾಡಿಲ್ಲ ಎಂದರೆ, ಅವುಗಳ ಬಗ್ಗೆ ನನಗೆ ಗೊತ್ತಿಲ್ಲ.

-ಮರುವಿಚಾರಣೆ - ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

(ಕೆ. ಎಸ್. ಗಂಗಣ್ಣವರ್)
ಪ್ರಧಾನ ಜಿಲ್ಲಾ ಮತ್ತು ಸತ್ರ/ವಿಶೇಷ ನ್ಯಾಯಾಧೀಶರು,
ಉಡುಪಿ.